ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ ರೋಣ

ಸಿ.ಸಿ. ನಂ.**748/2025**

ಫಿರ್ಯಾದಿದಾರರು - ಕರ್ನಾಟಕ ಸರ್ಕಾರ (ಗಜೇಂದ್ರಗಡ ಪೋಲಿಸ್)

ವಿರುದ್ಧ

ಆರೋಪಿ - ಮಲ್ಲನಗೌಡ ತಂದೆ ರಾಮನಗೌಡ ಗೌಡ್ರ,
ವಯಾಃ 21 ವರ್ಷ, ಉಃ ವಿದ್ಯಾರ್ಥಿ,
ಸಾಃ ಹಿರೇಕೊಪ್ಪ, ತಾಃ ಗಜೇಂದ್ರಗಡ, ಜಿಃ ಗದಗ.

ಅಪಾದನೆ

ಶ್ರೀ. ಹುಲುಗಪ್ಪ ಡಿ., ಬಿ.ಎ., ಎಲ್ಎಲ್.ಬಿ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ರೋಣ ಆದ ನಾನು ನಿಮ್ಮ ವಿರುದ್ಧ ಮಾಡುತ್ತಿರುವ ಅಪಾದನೆ ಏನೆಂದರೆಃ-

ದಿನಾಂಕ 11.02.2025 ರಂದು ಸಾಯಂಕಾಲ 05-45 ಗಂಟೆ ಸುಮಾರಿಗೆ ಗಜೇಂದ್ರಗಡ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದ ಗಜೇಂದ್ರಗಡ ತಾಲೂಕಿನ ಈದ್ಗಾ ಮೈದಾನದ ಮುಂದೆ ಕೆ.ಕೆ. ಸರ್ಕಲ್ ಕಡೆಗೆ ಹೋಗುವ ಕಾಂಕ್ರೀಟ್ ರಸ್ತೆಯ ಮೇಲೆ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಹೊಂಡ ಶೈನ್ ಕಂಪನಿಯ ಮೋಟಾರ್ ಸೈಕಲ್ ನೋಂದಣಿ ಸಂಖ್ಯೆ ಕೆಎ-26/ಇಇ-4442 ನ್ನು ಗಜೇಂದ್ರಗಡ ಚೆನ್ನಮ್ಮ ಸರ್ಕಲ್ ಕಡೆಯಿಂದ ಗಜೇಂದ್ರಗಡ ಈದ್ಗಾ ಮೈದಾನದಿಂದ ಚೌಕಿ ಮಠದ ಕಡೆಗೆ ದುಡುಕಿನಿಂದ ನಿಮ್ಮ ವಾಹನವನ್ನು ನಡೆಸಿರುತ್ತಿರಿ ಎಂದು, ಆ ಮೂಲಕ ಭಾ.ನ್ಯಾಸಂ. ಕಲಂ **281** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

**2.** ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಹೊಂಡ ಶೈನ್ ಕಂಪನಿಯ ಮೋಟಾರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-26/ಇಇ-4442 ನ್ನು ಗಜೇಂದ್ರಗಡ ಚೆನ್ನಮ್ಮ ಸರ್ಕಲ್ ಕಡೆಯಿಂದ ದುಡುಕಿನಿಂದ ಚಲಾಯಿಸಿಕೊಂಡು ಹೋಗಿ, ಚಾಸಾ-6 ರವರು ಬಜಾಜ ಡಿಸ್ಕವರ್ ಮೋಟಾರ್ ಸೈಕಲ್ ನೋಂದಣಿ ಸಂಖ್ಯೆ ಕೆಎ-26/ಕೆ-2139 ನೇದ್ದರ ಹಿಂದೆ ಚಾಸಾ-7 ರವರಿಗೆ ಕೂಡಿಸಿಕೊಂಡು ಈದ್ಗಾ ಮೈದಾನದಿಂದ ಚೌಕಿ ಮಠದ ಕಡೆಗೆ ಹೋಗುತ್ತಿದ್ದಾಗ ಮೋಟಾರ್ ಸೈಕಲಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿ, ಚಾಸಾ-6 ರವರಿಗೆ ಬಲಗೈ, ಹೊಟ್ಟಗೆ, ಬೆನ್ನಿಗೆ ಸಾಧಾ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು, ಆ ಮೂಲಕ ಭಾ.ನ್ಯಾಸಂ. ಕಲಂ **125**(ಎ) ರಡಿಯಲ್ಲಿ ಶಿಕ್ಷಾರ್ಹ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

**3.** ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಹೊಂಡ ಶೈನ್ ಕಂಪನಿಯ ಮೋಟಾರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-26/ಇಇ-4442 ನ್ನು ಗಜೇಂದ್ರಗಡ ಚೆನ್ನಮ್ಮ ಸರ್ಕಲ್ ಕಡೆಯಿಂದ ದುಡುಕಿನಿಂದ ಚಲಾಯಿಸಿಕೊಂಡು ಹೋಗಿ, ಚಾಸಾ-6 ರವರು ಬಜಾಜ ಡಿಸ್ಕವರ್ ಮೋಟಾರ್ ಸೈಕಲ್ ನೋಂದಣಿ ಸಂಖ್ಯೆ ಕೆಎ-26/ಕೆ-2139 ನೇದ್ದರ ಹಿಂದೆ ಚಾಸಾ-7 ರವರಿಗೆ ಕೂಡಿಸಿಕೊಂಡು ಈದ್ಗಾ ಮೈದಾನದಿಂದ ಚೌಕಿ ಮಠದ ಕಡೆಗೆ ಹೋಗುತ್ತಿದ್ದಾಗ ಮೋಟಾರ್ ಸೈಕಲಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿ, ಚಾಸಾ-7 ರವರಿಗೆ ಮುಖಕ್ಕೆ ಬಲಗಾಲಿನ ಬೆರಳಿಗೆ ಭಾರಿ ರಕ್ತಗಾಯಪಡಿಸಿರುತ್ತೀರಿ ಎಂದು, ಆ ಮೂಲಕ ಭಾ.ನ್ಯಾಸಂ. ಕಲಂ **125(ಬಿ)** ರಡಿಯಲ್ಲಿ ಶಿಕ್ಷಾರ್ಹ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

**4.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಧಿಕೃತ ಚಾಲನಾ ಪರವಾನಿಗೆಯನ್ನು ಪಡೆಯದೇ ಹೊಂಡ ಶೈನ್ ಕಂಪನಿಯ ಮೋಟಾರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-26/ಇಇ-4442 ನೇದ್ದನ್ನು ಚಲಾಯಿಸಿರುತ್ತೀರಿ ಎಂದು ಈ ಮೂಲಕ ಎಂ.ವಿ. ಕಾಯ್ದೆ ಕಲಂ **3** ರೆ/ವಿ ಕಲಂ **181** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

ಮೇಲ್ಕಂಡ ಆರೋಪಗಳನ್ನು ಆರೋಪಿಯಾದ ನೀವು ಈ ನ್ಯಾಯಾಲಯದ ವಿಚಾರಣಾ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ಸದರಿ ಆರೋಪಗಳಿಗೆ ನನ್ನ ಮುಂದೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೀದ್ದೇನೆ.

ದಿನಾಂಕಃ

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ರೋಣ.

## ಆರೋಪಿಯ ಹೇಳಿಕೆ

ಪ್ರಶ್ನೆ 1) ಈಗ ಓದಿ ಹೇಳಲಾದ ಆಪಾದನೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ-

ಪ್ರಶ್ನೆ 2) ನೀಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-

(ಆರೋಪಣೆಯನ್ನು ಆರೋಪಿತನಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ)

ದಿನಾಂಕಃ

ಪ್ರಧಾನ ದಿವಾಣಿ ನ್ಯಾಯಾಧೀಶರು<br>ಹಾಗೂ ಜೆ.ಎಂ.ಎಫ್.ಸಿ., ರೋಣ.

<u>ಆರೋಪಿಯ ಸಹಿಃ</u>